ಕ್ಕಿಂತ ಜಾಸ್ತಿ ಇದೆ. ದಿನಾಂಕ ೧೧-೪-೮೮ರಂದು ಕೊಡ್ಲಿಗಿ ತಹಶೀಲ್ದಾರರಿಗೆ ಮಾನ್ಯ ಮುಖ್ಯ ಮಂತ್ರಿಗಳ ಕಚೇರಿಯಿಂದ ಪತ್ರ ಬಂದಿದ್ದ, ದಿನಾಂಕ ೨೨-೪-೮೮ ರಂದು ಉತ್ತರವನ್ನು ಕಳುಹಿಸಿರುತ್ತಾರೆ.

6. ಶಾಸಕರುಗಳಿಗೆ ದಿನಭತ್ಯ ಹಾಗೂ ಪ್ರಯಾಣದರ ನೀಡುವಲ್ಲಿ ಇಬ್ಬಗೆಯ ನೀತಿಯನ್ನು ಅನುಸರಿಸುತ್ತಿರುವುದು.

ಶ್ರೀ ಆರ್. ರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ. ಶಾಸಕರುಗಳು ವಿಧಾನ ಪರಿಷತ್ತಿನಲ್ಲಿ ಉಪಸ್ಥಿತರಿದ್ದಾಗ, ದಿನದ ಭತ್ಯ ೭೫ ರೂ. ಹಾಗೂ ಪ್ರಯಾಣದ ದರವನ್ನು ೧ ಕಿ.ಮೀ.ಗೆ ೨.೫೦ ರಂತೆ ನೀಡುವುದು. ಇದೇ ಶಾಸಕರುಗಳು ತಾಲ್ಲೂಕು ಭೂ ಪರಿಹಾರ ಸಮಿತಿಗೆ ಹಾಜರಾದಾಗ ೫೦ ರೂಪಾಯಿ ಮತ್ತು ೧ ಕಿ.ಮೀ.ಗೆ ೦.೭೫ ಪೈಸೆಯಂತೆಯೂ ಮತ್ತು ಇದೇ ರೀತಿಯಲ್ಲಿ ಜಿಲ್ಲಾ ಪರಿಷತ್ ಸಭೆಗೆ ಹಾಜರಾಗಲು ನೀಡುತ್ತಿರುವುದರಿಂದ ಓರ್ವ ವ್ಯಕ್ತಿಗೆ ಇಬ್ಬಗೆಯ ನೀತಿಯನ್ನು ಅನುಸರಿಸಿದಂತಾಗುವುದಲ್ಲದೆ ಇದೇ ರೀತಿ ಹಿಂದಿನ ಕೆ.ಡಿ.ಪಿ. ಸಭೆಗೆ ಹಾಜರಾದಾಗ ಯಾವುದೇ ರೀತಿಯ ಟಿ ಎ ಮತ್ತು ಡಿ.ಎ ನೀಡದಿರುವುದು ಸರ್ಕಾರದ ನೀತಿಗೆ ವಿರುದ್ಧವಾಗಿದೆ. ಆದ ಪ್ರಯುಕ್ತ ಈ ವಿಷಯದಲ್ಲಿ ಏಕ ರೀತಿಯ ನಿರ್ಣಯವಾಗಬೇಕೆಂದು ಕೋರುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಷಯ ಸಧ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

7. ಉಡುಪಿಯಿಂದ ಹುಬ್ಬಳ್ಳಿ ಧಾರವಾಡ ಮತ್ತು ಬೆಳಗಾಂಗೆ ಲಕ್ಸುರಿ ಬಸ್ಸುಗಳನ್ನು ಓಡಿಸುವುದು.

ಶ್ರೀಮತಿ. ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೆ. ಉಡುಪಿ ನಗರ, ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿಯುತ್ತಾ ಇದೆ. ಶಾಲಾ ಕಾಲೇಜುಗಳು ಬಹು ಸಂಖ್ಯೆಯಲ್ಲಿದೆ. ಅದೇ ರೀತಿ ಅಷ್ಟ ಮಠಗಳಿರುವ ಉಡುಪಿ ಧಾರ್ಮಿಕ ನೆಲೆಯಲ್ಲೂ ಪ್ರಸಿದ್ಧವಾಗಿದೆ. ಇಲ್ಲಿಗೆ ಬೇರೆ ಬೇರೆ ಊರುಗಳಿಂದ ಬರುವ, ಹೋಗುವ ಯಾತ್ರಿಕರು ಸದಾ ಇದ್ದೇ ಇರುತ್ತಾರೆ. ಆ ಹಿನ್ನೆಲೆಯಲ್ಲಿ ಉಡುಪಿಯಿಂದ ಹುಬ್ಬಳ್ಳಿ, ಧಾರವಾಡ, ಬೆಳಗಾವಿಗೆ ಲಕ್ಸುರಿ ಬಸ್ಸಿನ ಓಡಾಟ ಪ್ರಾರಂಭಿಸಬೇಕೆಂದು ನಾನಂ ೧೪-೫-೮೯ರಿಂದು ಸಾರಿಗೆ ಸಚಿವರಾದ ತಮಗೆ ಪತ್ರ ಬರೆದಿದ್ದೆ, ಅದಕ್ಕೆ ತಾವು ಉತ್ತರಿಸಿ, ಈ ಕುರಿತು ಸೂಕ್ತ ವ್ಯವಸ್ಥೆ ಮಾಡಲು ಜನರಲ್ ಮ್ಯಾನೇಜರ್‌ರವರಿಗೆ ಆದೇಶ ನೀಡುವುದಾಗಿ ತಿಳಿಸಿರುವುದನ್ನು ವ್ಯಕ್ತಪಡಿಸಿದ್ದೀರಿ. ಆದರೆ ಈವರೆಗೂ ಈ ಕುರಿತು ಯಾವುದೇ ವ್ಯವಸ್ಥೆ ಆಗಿರುವುದಿಲ್ಲ. ಉಡುಪಿಯಲ್ಲಿ ದಿನದಿಂದ ದಿನಕ್ಕೆ ಹುಬ್ಬಳ್ಳಿ, ಧಾರವಾಡ, ಬೆಳಗಾವಿಗೆ ಪ್ರಯಾಣ ಮಾಡುವವರ ಸಂಖ್ಯೆ ಸಾಕಷ್ಟಿದೆ. ಇಲ್ಲಿಂದ ಲಕ್ಸುರಿ ಬಸ್ಸು ಇಲ್ಲದೇ ಇರುವುದು ಈ ಪ್ರಮುಖ ನಗರದ ಕೀರ್ತಿಗೆ ಕಳಂಕವಾಗಿರುತ್ತದೆ. ಆದಕಾರಣ ಧಾರ್ಮಿಕ ಮತ್ತು ಶಿಕ್ಷಣ ಕೀರ್ತಿಯ ಉಡುಪಿಗೆ ಅತಿ ಶೀಘ್ರವೇ ನಾನು ಮೇಲೆ ಸೂಚಿಸಿದಂತೆ, ಲಕ್ಸುರಿ ಬಸ್ಸನ್ನು ಹುಬ್ಬಳ್ಳಿ, ಧಾರವಾಡ, ಬೆಳಗಾವಿಗೆ ಓಡಾಡುವಂತೆ ಆದೇಶ ನೀಡಿ, ಪುಣ್ಯವನ್ನು ಕಟ್ಟಿಕೊಳ್ಳಬೇಕೆಂದು ಆಶಿಸುತ್ತೇನೆ. ಈ ಕುರಿತು ಸಾರಿಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಪಿ. ಜಿ ಆರ್. ಸಿಂಧ್ಯ (ಮಾನ್ಯ ಸಾರಿಗೆ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಮಂಗಳೂರು-ಮುಂಬಯಿಗಳ ನಡುವೆ ಉಡುಪಿ, ಕುಂದಾಪುರ, ಭಟ್ಕಳ ಕುಮಟಾ, ಸಿರಸಿ, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾಂ ಮಾರ್ಗವಾಗಿ ಮೂರು ಸುಪಿಹಾರಿ ಮತ್ತು ಎರಡು ಅರೆ ಸುಖಾಸೀನ ಸಾರಿಗೆಗಳ ಸೌಲಭ್ಯವನ್ನು ಕಲ್ಪಿಸಿದೆ. ಇದಲ್ಲದೆ, ಮಂಗಳೂರಿನಿಂದ ಉಡುಪಿ ಮಾರ್ಗವಾಗಿ ಬೆಳಗಾಂಗೆ ಒಂದು ಪ್ರತ್ಯೇಕ ಅರೆ ಸುಖಾಸೀನ ಸಾರಿಗೆ ಸೌಲಭ್ಯವನ್ನೂ ಸಹ ಕಲ್ಪಿಸಲಾಗಿದೆ. ಈ ಸಾರಿಗೆಗಳಿಗೆ ಉಡುಪಿಯಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿದೆಯಲ್ಲದೆ ಮಂಗಳೂರಿನಿಂದ ಪಡೆದ ಟಿಕೆಟ್ಟುಗಳಿಗೆ ಉಡುಪಿಯಲ್ಲಿ ಹತ್ತಿಕೊಳ್ಳುವ ಸೌಲಭ್ಯವನ್ನು ಸಹ ನೀಡಲಾಗಿದೆ. ಧರ್ಮಸ್ಥಳ ಪೂನ ಅರೆ ಸುಖಾಸೀನ ಸಾರಿಗೆಯೂ ಕೂಡ ಉಡುಪಿ ಹುಬ್ಬಳ್ಳಿ ಧಾರವಾಡ ಮತ್ತು ಬೆಳಗಾಂ

ನಗರಗಳನ್ನು ಸಂಪರ್ಕಿಸುತ್ತದೆ. ಇದಲ್ಲದೆ, ಮಂಗಳೂರು—ಮಿರಜ್ ಮಂಗಳೂರು—ಧಾರವಾಡ ಉಡುಪಿ—ಬೆಳಗಾಂ, ಉಡುಪಿ—ಬಿಜಾಪುರ ಹಾಗೂ ಧರ್ಮಸ್ಥಳದಿಂದ ಹುಬ್ಬಳ್ಳಿ, ಬೈಲಹೊಂಗಲ ಮತ್ತು ಬಿಜಾಪುರಗಳ ನಡುವೆ ಸಂಚರಿಸುತ್ತಿರುವ ವೇಗದೂತ ಸಾರಿಗೆಗಳು ಉಡುಪಿ ನಗರದ ಸಾರಿಗೆ ಬೇಡಿಕೆಗಳನ್ನು ಸಮರ್ಥವಾಗಿ ಪೂರೈಸುತ್ತಿವೆ. ಆದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ಉಡುಪಿಯಿಂದ ಹುಬ್ಬಳ್ಳಿ ಧಾರವಾಡ ಮತ್ತು ಬೆಳಗಾಂ ನಗರಗಳಿಗೆ ಪ್ರತ್ಯೇಕ ಸುವಿಹಾರಿ ಸಾರಿಗೆಗಳನ್ನು ಪ್ರಾರಂಭಿಸುವ ಅವಶ್ಯಕತೆ ಕಂಡುಬರುತ್ತಿಲ್ಲ. ಆದಾಗ್ಯೂ ಮುಂದಿನ ದಿವಸಗಳಲ್ಲಿ ಅಗತ್ಯಕಂಡುಬಂದರೆ, ಈ ನಗರಗಳ ನಡುವೆ ಸುವಿಹಾರಿ ಸಾರಿಗೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

8. ಉಳ್ಳಾಲ ಕ್ಷೇತ್ರದ ತೋಕ್ಕೊಟ್ಟಿನಲ್ಲಿ ಕೆ.ಇ.ಬಿ.ಯಂ ಇನ್ನೊಂದು ಕೌಂಟರನ್ನು ತೆರೆಯುವುದು.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೆ, ಉಳ್ಳಾಲ ಕ್ಷೇತ್ರದ ತೋಕ್ಕೊಟ್ಟಿನಲ್ಲಿ ಕೆ. ಇ. ಬಿ. ಆಫೀಸಿದೆ. ಉಳ್ಳಾಲ ಕ್ಷೇತ್ರದ ಅನೇಕ ಗ್ರಾಮಗಳ ವಿದ್ಯುತ್ ಗ್ರಾಹಕರು ತಮ್ಮ ವಿದ್ಯುತ್‌ನ ಹಣವನ್ನು ಕಟ್ಟಲು ತೊಕ್ಕೊಟ್ಟು ಆಫೀಸಿಗೆ ಬರಬೇಕಾಗಿದೆ. ಈ ಆಫೀಸಿನಲ್ಲಿ ವಿದ್ಯುತ್ ಬಿಲ್ಲಿನ ಹಣ ಪಡೆದುಕೊಳ್ಳಲು ಒಂದೇ ಕೌಂಟರ್ ಇದೆ. ಅವರು ಇಂತಿಷ್ಟು ಎಂಬ ಸಮಯದ ಬೋರ್ಡ್ ಹಾಕಿರುತ್ತಾರೆ. ಆ ಸಮಯಕ್ಕಿಂತ ೫ ನಿಮಿಷ ಕೂಡ ಹೆಚ್ಚು ನಿಲ್ಲಲಾರರು. ಹಣ ಪಡೆಯಲಾರರು. ಪ್ರತಿದಿನ ತೊಕ್ಕೊಟ್ಟು ಆಫೀಸಿನಲ್ಲಿ ಫರ್ಲಾಂಗಿಗೂ ಮಿಕ್ಕಿದ ಕ್ಯೂ ಇರುತ್ತದೆ. ಸಮಯ ಆದ ಕೂಡಲೆ ಕೌಂಟರ್ ಮುಚ್ಚಿ ಬಿಡುತ್ತಾರೆ. ಪ್ರತಿನಿತ್ಯ ಕ್ಯೂ ನಿಂತ ೨೦ ರಿಂದ ನಲವತ್ತು ಜನರು ಹಣ ಕಟ್ಟಲಾಗದೆ ವಾಪಸ್ಸು ಹೋಗಬೇಕಾಗಿದೆ. ಗ್ರಾಹಕರಿಗೆ ಈ ಸಂಕಷ್ಟವನ್ನು ಸಹಿಸಿಕೊಳ್ಳಲು ಸಾಧ್ಯವಾಗಲಾರದು. ಈ ಒತ್ತಡ ತಪ್ಪಿಸಲು ತೊಕ್ಕೊಟ್ಟು ಆಫೀಸಿನಲ್ಲಿ ಇನ್ನೊಂದು ಕೌಂಟರನ್ನು ತೆರೆಯಬೇಕಂ. ಇಲ್ಲವೇ ಬಹಳ ದೊಡ್ಡ ಗ್ರಾಮವಾದ ಉಳ್ಳಾಲ ಪೇಟೆಯಲ್ಲಿ ಈ ಬಿಲ್ಲಿನ ಹಣ ಕಟ್ಟಲು ಕೆ,ಇ,ಬಿ. ವ್ಯವಸ್ಥೆ ಮಾಡಬೇಕು. ಈ ಕಾರ್ಯ ಅತಿ ತ್ವರಿತ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆ ರಾಜ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಉಲ್ಲಾಳ ಕ್ಷೇತ್ರದ ತೊಕ್ಕೊಟ್ಟಿನಲ್ಲಿ ಲೆಕ್ಕರಹಿತ ಶಾಖಾ ಕಛೇರಿ ಇದೆ. ಇಲ್ಲಿ ಗ್ರಾಹಕರಿಂದ ಹಣ ಪಡೆಯುವ ವ್ಯವಸ್ಥೆಯಿಲ್ಲ. ಇಲ್ಲಿನ ಗ್ರಾಹಕರು ಹಣವನ್ನು ಉಲ್ಲಾಳಕ್ಕೆ ಹೋಗಿ ಕಟ್ಟಬೇಕು, ಅಲ್ಲದೆ ತೊಕ್ಕೊಟ್ಟಿಗೆ ಸುಮಾರು ೨ ಕಿ.ಮೀ ದೂರದಲ್ಲಿರುವ ದೇರಳಕಟ್ಟೆ ಎಂಬಲ್ಲಿ ಸಿಂಡಿಕೇಟ್ ಬ್ಯಾಂಕಿನಲ್ಲೂ ಕೂಡ ಹಣ ಪಾವತಿ ಮಾಡುವ ವ್ಯವಸ್ಥೆಯಿದೆ.

ತೊಕ್ಕೊಟ್ಟಿನ ಗ್ರಾಹಕರಿಗೆ ಹಣಪಾವತಿಗೆ ಹೆಚ್ಚಿನ ಅನುಕೂಲ ಮಾಡುವ ದೃಷ್ಟಿಯಿಂದ ೨೫–೫–೮೮ರಿಂದ ಇದರ ಸುತ್ತಮುತ್ತ ಪ್ರದೇಶಗಳಲ್ಲಿ ಕೆಳಕಂಡ ದಿನಗಳಲ್ಲಿ ಹಣ ಪಡೆಯುವ ವ್ಯವಸ್ಥೆ ಮಾಡಲಾಗಿದೆ. ಆದುದರಿಂದ ತೊಕ್ಕೊಟ್ಟಿನ ಗ್ರಾಹಕರು ಸಮೀಪದಲ್ಲಿನ ಈ ಗ್ರಾಮಗಳಿಗೆ ಹೋಗಿ ಅಲ್ಲಿ ಬೇಕಾದ ಹಣ ಪಾವತಿ ಮಾಡಬಹುದು ಇದರಿಂದಾಗಿ ಇವರಿಗೆ ಹಣ ಪಾವತಿ ಮಾಡಲು ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲಾಗಿದೆ.

೧) ತಲಪಾಡಿಯಲ್ಲಿ ಪ್ರತಿತಿಂಗಳ ೩ನೇ ದಿನಾಂಕದಂದು ಹಣ ಪಡೆಯಲಾಗುತ್ತಿದೆ.
೨) ಕೋಣಾಜೆಯಲ್ಲಿ ಪ್ರತಿತಿಂಗಳ ೪ ರಂದು ,,
೩) ವಂಜಿನಾಡಿಯಲ್ಲಿ ಪ್ರತಿತಿಂಗಳ ೫ ರಂದು ,,
೪) ಉಲ್ಲಾಳ ಗ್ರಾಮೀಣ ಕೇಂದ್ರದಲ್ಲಿ ಪ್ರತಿತಿಂಗಳ ೧೬ ರಂದು ,,
೫) ಕೋಡಿಯಲ್ಲಿ ಪ್ರತಿತಿಂಗಳ ೧೭ ರಂದು ,,
೬) ಅರೆಕಳದಲ್ಲಿ ಪ್ರತಿತಿಂಗಳಂ ೨೭ ರಂದು ,,